# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ರವರ ನ್ಯಾಯಾಲಯ, ಹುಣಸೂರು.

## ಸಿ.ಸಿ. ಸಂಖ್ಯೆಃ 182/2021

## ದಿನಾಂಕ ಃ 28.11.2025

| | |
|---|---|
| ಫಿರ್ಯಾದಿದಾರರುಃ | **ಜಯಲಕ್ಷ್ಮಮ್ಮ ಕೋಂ ಪ್ರೇಮ್ ಕುಮಾರ್,**<br>ವಯಸ್ಸು 45 ವರ್ಷ,<br>ವಾಸಃ ಹಬ್ಬನಕುಪ್ಪೆ ಗ್ರಾಮ,<br>ಹನಗೋಡು ಹೋಬಳಿ,<br>ಹುಣಸೂರು ತಾಲ್ಲೂಕು. |
| | **- ವಿರುದ್ಧ -** |
| ಆರೋಪಿ: | **ಚಂದ್ರು ಬಿನ್ ದೊಡ್ಡತಮ್ಮೇಗೌಡ,**<br>ವಯಸ್ಸು 55 ವರ್ಷ,<br>ವಾಸಃ ಹಬ್ಬನಕುಪ್ಪೆ ಗ್ರಾಮ,<br>ಹನಗೋಡು ಹೋಬಳಿ,<br>ಹುಣಸೂರು ತಾಲ್ಲೂಕು. |

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

1) **ಪ್ರಃ-** ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದು ಕೊಂಡಿರುವಿರಾ?

**ಉ :**

2) **ಪ್ರಃ-** ಪ್ರಾಸಾಃ1 ಶ್ರೀಮತಿ ಜಯಲಕ್ಷ್ಮೀರವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆರೋಪಿಯಾದ ನೀವು ನಿಮ್ಮ ಕಾನೂನು ಬದ್ಧ ಅವಶ್ಯಕತೆಗಾಗಿ ತನ್ನಿಂದ ದಿಃ **01.08.2020** ರಂದು **ರೂ.4,75,000/-** ಗಳನ್ನು

ಸಾಲವಾಗಿ ಪಡೆದುಕೊಂಡಿರುತ್ತೀರಿ. ಸದರಿ ಸಾಲದ ತೀರುವಳಿಯನ್ನು ಎರಡು ತಿಂಗಳ ವಾಯಿದೆಯೊಳಗಾಗಿ ಪ್ರಾಸಾ.1 ರವರಿಗೆ ಆರೋಪಿಯಾದ ನೀವು ಮರುಪಾವತಿ ಮಾಡುತ್ತೇನೆಂದು ತಿಳಿಸಿ ಸಾಲ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

3) **ಪ್ರಃ-** ಪ್ರಾಸಾ-1 ರವರು ಮುಂದುವರೆದು, ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸದರಿ ಸಾಲದ ತೀರುವಳಿಯನ್ನು ಎರಡು ತಿಂಗಳ ವಾಯಿದೆಯೊಳಗಾಗಿ ಪ್ರಾಸಾ.1 ರವರಿಗೆ ಆರೋಪಿಯಾದ ನೀವು ಮರುಪಾವತಿ ಮಾಡುವುದಾಗಿ ತಿಳಿಸಿ, ಅದೇ ದಿನ ಆರೋಪಿಯು ಸದರಿ ಸಾಲದ ತೀರುವಳಿಗಾಗಿ ನೀವು ನಿಮ್ಮ ಖಾತೆಯಿರುವ ಚಿಲ್ಕುಂದ ಶಾಖೆಯ, ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಬ್ಯಾಂಕಿನ ಚೆಕ್ ಸಂಖ್ಯೆ 225669 ಗೆ ಸಹಿ ಮಾಡಿ, ದಿನಾಂಕಃ 01.10.2020, ರೂ.4,75,000/- ಎಂದು ನಮೂದಿಸಿ ಚೆಕ್ಕನ್ನು ನೀಡಿರುತ್ತೀರೆಂದು ತಿಳಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

4) **ಪ್ರಃ-** ಪ್ರಾಸಾ-1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಆರೋಪಿಯು ನೀಡಿದ ಚೆಕ್ಕನ್ನು ನಗಧೀಕರಣಕ್ಕಾಗಿ ನಾನು ನನ್ನ ಖಾತೆ ಹೊಂದಿರುವ ಚಿಲ್ಕುಂದ ಶಾಖೆಯ ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಬ್ಯಾಂಕಿಗೆ ದಿನಾಂಕ 01.10.2020 ರಂದು ಚೆಕ್ಕನ್ನು ಹಾಜರುಪಡಿಸಿದ್ದಾರೆಂದು ತಿಳಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

5) **ಪ್ರಃ-** ಪ್ರಾಸಾ-1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸದರಿ ಬ್ಯಾಂಕ್‌ನವರು "Insufficient Funds" ಎಂಬ ಹಿಂಬರಹದೊಂದಿಗೆ ದಿನಾಂಕಃ 07.10.2020 ರಂದು ಮರಳಿ ಚೆಕ್ಕನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಿರುತ್ತಾರೆ. ಎಂದು ತಿಳಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

6) **ಪ್ರ** ಃ**-** ಪ್ರಾಸಾ-1 ರವರು ಮುಂದುವರೆದು, ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಆರೋಪಿತನು ರೂ.4,75,000/- ಗಳನ್ನು ವಾಪಸ್ಸು ನೀಡದೇ ಇದ್ದುದರಿಂದ ತಾನು ವಕೀಲರ ಮೂಲಕ ದಿನಾಂಕ 10.10.2020 ರಂದು ನೋಟೀಸನ್ನು ನೀಡಿದ್ದು, ಸದರಿ ನೋಟೀಸು ಆರೋಪಿಗೆ ದಿನಾಂಕ 20.10.2020 ರಂದು ಜಾರಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

7) **ಪ್ರ** ಃ**-** ಪ್ರಾಸಾ-1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಎಲ್ಲಾ ಸತ್ಯ ಹಾಗೂ ಸಹಿಗಳು ತನ್ನದೆಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

8) **ಪ್ರಃ**- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿತನು ತನಗೆ ನೀಡಿದ ಚೆಕ್ಕನ್ನು ನಿ.ಪಿ.-1 ಎಂದು, ಬ್ಯಾಂಕಿನ ಹಿಂಬರಹಗಳನ್ನು ನಿ.ಪಿ.-2 ಎಂದು ಬ್ಯಾಂಕಿನ ಚಲನ್ ನ್ನು ನಿ.ಪಿ.3 ಎಂದು, ಕಾನೂನುಬದ್ಧ ನೋಟೀಸನ್ನು

ನಿ.ಪಿ.-4 ಎಂದು, ಅಂಚೆ ರಶೀದಿಯನ್ನು ನಿ.ಪಿ.-5 ಎಂದು, ವಾಪಸ್ಸಾದ ಅಂಚೆ ಲಕೋಟೆಯನ್ನು ನಿ.ಪಿ.-6 ಎಂದು, ಗುರುತಿಸಿಕೊಂಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

9) **ಪ್ರ ಃ-** ಪ್ರಾಸಾ-2 ಶರತ್ ಬಾಬು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 16.05.2024 ರಿಂದ ಇಲ್ಲಿಯವರೆಗೂ ಕರ್ನಾಟಕ ಬ್ಯಾಂಕ್, ಚಿಲ್ಕುಂದ ಶಾಖೆಯಲ್ಲಿ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ, ನ್ಯಾಯಾಲಯದಿಂದ ನನಗೆ ಸಾಕ್ಷ್ಯ ನುಡಿಯುವಂತೆ ಸಮನ್ಸ್ ಬಂದ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು ಇಂದು ನ್ಯಾಯಾಲಯಕ್ಕೆ ಆರೋಪಿಗೆ ಸೇರಿದ ಖಾತೆಯ Specimen ಹಸ್ತಾಕ್ಷರದ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಸದರಿ ಮೂಲ ದಾಖಲಾತಿಗಳನ್ನು ದೃಢೀಕೃತ ದಾಖಲಾತಿಗಳೊಂದಿಗೆ ತಾಳೆ ನೋಡಿ ನಿಪಿ-7, 7(ಎ) ರಿಂದ (ಡಿ) ಎಂದು ಗುರುತಿಸಲಾಯಿತು. ಆರೋಪಿಗೆ ಸಂಬಂಧಿಸಿದ ಖಾತೆಯ ದಿಃ 01.01.2018 ರಿಂದ ದಿಃ 16.04.2024 ರವರೆಗಿನ ಖಾತಾ ಎಕ್ಸ್ ಟ್ರ್ಯಾಕ್ಟ್ ನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ದಿನಾಂಕ 07.10.2020 ರಲ್ಲಿ ಆರೋಪಿಗೆ ಸೇರಿದ ಖಾತೆಯಲ್ಲಿ ಹಣ ಇರಲಿಲ್ಲ. ನಿಪಿ-1 ರಂತೆ ಚೆಕ್ ಆರೋಪಿಗೆ ಸೇರಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉ :**

10) **ಪ್ರಃ-** ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?

**ಉ :**

11) **ಪ್ರಃ-** ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ? ಅವರ ವಿಚಾರಣೆ ಆಗಬೇಕೆ?

**ಉ :**

12)**ಪ್ರಃ-** ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸುವಿರಾ?

**ಉ :**

(ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಎದುರು ಆರೋಪಿತನಿಗೆ ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಅರೋಪಿತ ಹೇಳಿದ ಉತ್ತರಗಳನ್ನು ಯಾಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಧೃಢೀಕರಿಸಲಾಗಿದೆ)

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಯವರು, ಹುಣಸೂರು**

**ಆರೋಪಿಯ ಸಹಿ**